**ಓ.ಎಸ್. ನಂ. 40/2014 ಪಿ.ಡಬ್ಲೂ-1 ಹೆಸರು - ಪುಟ್ಟಣ್ಣಯ್ಯ**

**ಸಾಕ್ಷಿಯನ್ನು ದಿನಾಂಕಃ 01/12/2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಕುಮಾರ 4 ನೇ ಪ್ರತಿವಾದಿ ಪರ ವಕೀಲರಿಂದಃ-**

ವಾದಿ ನನ್ನ ದೊಡ್ಡಮ್ಮ, ಅವರು ಹುಲ್ಲಹಳ್ಳಿ ಗ್ರಾಮದಲ್ಲಿ ಇರುತ್ತಾರೆ. ವಾದಿ ಆರೋಗ್ಯವಾಗಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಆರೋಗ್ಯ ಸರಿ ಇಲ್ಲ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿಲ್ಲ. ವಾದಿ ಈಗಲೂ ಕೂಡ ಆರೋಗ್ಯವಂತರಾಗಿ ಓಡಾಡಿಕೊಂಡು ಇದ್ದಾರೆ ಎಂದರೆ ಸರಿಯಲ್ಲ. ವಾದಿಗೆ ವಯಸ್ಸಾಗಿರುವುದರಿಂದ ಮತ್ತು ಅವರಿಗೆ ಓಡಾಡಲು ಆಗದೇ ಇರುವುದರಿಂದ ಸಾಮಾನ್ಯ ಅಧಿಕಾರ ಪತ್ರ ಬರೆದಿದ್ದಾರೆ. ನಿಪಿ-1 ಅನ್ನು ಓದಿ ತಿಳಿದುಕೊಂಡಿದ್ದೇನೆ. ನಿಪಿ-1 ರಲ್ಲಿ ವಾದಿಗೆ ವಯಸ್ಸಾಗಿದ್ದು ಹುಷಾರಿಲ್ಲ ಎಂದು ನಮೂದು ಮಾಡಿಲ್ಲ. ವಾದಿ ನ್ಯಾಯಾಲಯಕ್ಕೆ ಬಂದರೆ ಸತ್ಯಂಶ ಹೊರಬರುತ್ತದೆ ಎನ್ನುವ ಕಾರಣಕ್ಕೆ ನಾನ ಮತ್ತು ವಾದಿ ಶರೀಕಾಗಿ ನಿಪಿ-1 ಅನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ವಾದಿ ಮತ್ತು 1 ಮತ್ತು 2 ನೇ ಪ್ರತಿವಾದಿಯರು ಪರಸ್ಪರ ಚೆನ್ನಾಗಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಕುಟುಂಬಕ್ಕೆ ದಾವಾ ಸ್ವತ್ತನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇಲ್ಲ. ನಿಪಿ-8 ರಂತೆ 1 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂಬರ್ 10/1 ಪಿ ರಲ್ಲಿ 1 ಎಕರೆ 14 ಗುಂಟೆ ಜಮೀನು ಇದೆ ಎಂದರೆ ಸರಿ. ಈ ದಾವೆಯಲ್ಲಿ ನಿಪಿ-8 ರಲ್ಲಿ ನಮೂದು ಇರುವ ಆಸ್ತಿಯನ್ನು ಸೇರಿಸಿಲ್ಲ. ಸದರಿ ಆಸ್ತಿಯನ್ನು ಸೇಸರಿಸಿ ಭಾಗ ಕೇಳಲು ಯಾವುದೇ ತೊಂದರೆ ಇರಲಿಲ್ಲ. ಸರ್ವೆ ನಂಬರ್ 10/1 ಪಿ ಆಸ್ತಿಯನ್ನು ವಾದಿ ಮತ್ತು 1 ನೇ ಪ್ರತಿವಾದಿ ಒಟ್ಟಿಗೆ ಉಳುಮೆ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿ ಮಾತ್ರ ಉಳುಮೆ ಮಾಡುತ್ತಿದ್ದಾರೆ ಮತ್ತು 1 ನೇ ಪ್ರತಿವಾದಿ ಸದರಿ ಆಸ್ತಿಯ ಖಾತೆ ಮಾಡಿಕೊಂಡಿರುವುದು ವಾದಿಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 10/1 ಪಿ ಜಮೀನಿನ ಖಾತೆ 1 ನೇ ಪ್ರತಿವಾದಿಯ ಹೆಸರಿಗೆ ಅವರ ತಂದೆ ಜೀವಂತ ಇದ್ದಾಗಲೇ ದಾಖಲಾಗಿದೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಖಾತೆ ದಾಖಲಾಗುವ ಕಾಲಕ್ಕೆ ವಾದಿ ಮತ್ತು 1 ನೇ ಪ್ರತಿವಾದಿ ಉತ್ತಮ ಸಂಬಂಧದಲ್ಲಿ ಇದ್ದರು ಎಂದರೆ ಸರಿ. ಸದರಿ ಸ್ವತ್ತಿನ ಖಾತೆ ದಾಖಲು ಮಾಡುವ ವಿಚಾರಕ್ಕೆ ವಾದಿಯ ಸಮ್ಮತಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 1 ನೇ ಪ್ರತಿವಾದಿಯ ನಡುವೆ ಕುಟುಂಬದ ಸ್ವತ್ತುಗಳ ವಿಚಾರವಾಗಿ ನಡೆದಿರುವ ವ್ಯವಹಾರಗಳ ಬಗ್ಗೆ ನಿಮಗೆ ಗೊತ್ತೇ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಗೊತ್ತು ಎಂದು ನುಡಿಯುತ್ತಾರೆ. ನಮಗೆ ವಾದಿ ಮತ್ತು 1 ನೇ ಪ್ರತಿವಾದಿಯ ಕುಟುಂಬದ ವ್ಯವಹಾರಗಳ ಬಗ್ಗೆ ತಿಳಿಯದೇ ಇದ್ದರೂ ಕೂಡ ತಿಳಿದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು 3 ನೇ ಪ್ರತಿವಾದಿಗೆ ದಾವಾ ಸ್ವತ್ತಿನಲ್ಲಿ 1 ಎಕರೆ 1 ಗುಂಟೆ ಮಾರಾಟ ಮಾಡಿರುವ ವಿಚಾರ ವಾದಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಸದರಿ ಮಾರಾಟದಿಂದ ಬಂದ ಹಣವನ್ನು ವಾದಿ ಮತ್ತು 1 ನೇ ಪ್ರತಿವಾದಿ ವಿನಿಯೋಗಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕ್ರಯ ವ್ಯವಹಾರವು ಕುಟುಂಬದ ಅವಶ್ಯಕತೆಗಳಿಗಾಗಿ ಮಾಡಿದ ವ್ಯವಹಾರ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರು

ಸೇರಿ ಕ್ರಯದ ವ್ಯವಹಾರ ಮಾಡಿರುವ ವಿಚಾರ ನನಗೆ ಗೊತ್ತಿದ್ದರು ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಕೂಡ ವಾದಿ ಮತ್ತು ಪ್ರತಿವಾದಿ 1 ಮತ್ತು 2 ಅನ್ಯೋನ್ಯವಾಗಿ ಇದ್ದಾರೆ, ಆದ್ದರಿಂದಲೇ ಪ್ರತಿವಾದಿ 1 ಮತ್ತು 2 ನ್ಯಾಯಾಲಯದ ಮುಂದೆ ಬಂದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ 1 ಮತ್ತು 2 ರವರು ಶರೀಕಾಗಿ ಈ ದಾವೆ ಸಲ್ಲಿಸಿರುವುದರಿಂದ ಅವರುಗಳು ನ್ಯಾಯಾಲಯದ ಮುಂದೆ ಬಂದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ತಾನು ಕೊಂಡಂತಹ ಜಮೀನನ್ನು 4 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಕೂಡ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ 1 ನೇ ಪ್ರತಿವಾದಿಯಿಂದ ಜಮೀನನ್ನು ಖರೀದಿಸಿದ್ದಾರೆ ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ಆ ರೀತಿ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯ ಹೆಸರಿಗೆ ಆದ ಕ್ರಯ ಪತ್ರ ವಾದಿಗೂ ಕೂಡ ಬಂಧನಕಾರಿ ಎಂದರೆ ಸರಿಯಲ್ಲ. ವಾದಿಗೆ ಸದರಿ ಕ್ರಯ ಪತ್ರ ಬಂಧನಕಾರಿ ಎಂದು ಒಪ್ಪಿಕೊಂಡರೆ ನಮಗೆ ತೊಂದರೆ ಆಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಪ್ರತಿವಾದಿಯರು ವಾದಿಯೊಂದಿಗೆ ಶರೀಕಾಗಿ ದುರ್ಲಾಭ ಪಡೆಯುವ ಸಲುವಾಗಿ ಈ ದಾವೆಯನ್ನು ವಾದಿಯ ಮುಖಾಂತರ ಹಾಕಿಸಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು 3 ನೇ ಪ್ರವಾದಿಯಿಂದ ಜಮೀನು ಖರೀದಿಸಿದ ನಂತರ ಅವರು ಖರೀದಿಸಿದ ಜಮೀನಿನ ಸರ್ವೆ ನಂಬರ್ 1/3 ಎಂದು ಪೋಡ್ ಆಗಿದೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಸದ್ಭಾವನೆಯ ಖರೀದಿದಾರ ಎಂದರೆ ಸರಿಯಲ್ಲ. ನನಗೆ ದಾವಾ ಸಂಗತಿಗಳ ಬಗ್ಗೆ ಗೊತ್ತಿರದೇ ಇದ್ದರು ಕೂಡ ಗೊತ್ತಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು 1 ನೇ ಪ್ರತಿವಾದಿ ವಾಸವಿರುವ ಮನೆ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು 1 ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ. ವಾದಿಯು ಬೇರೆಯವರ ಜಾಗದಲ್ಲಿ ಶೆಡ್ ಅನ್ನು ಹಾಕಿಕೊಂಡು ವಾಸವಿದ್ದಾರೆ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**